ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 200- 206
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಯರವ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ

**ಡಾ. ಚಲುವರಾಜು* & ರಾಜೇಂದ್ರ ಕುಮಾರ್**

*ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

**ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

***Abstract:***

*ಒಂದು ಸಮಾಜದಲ್ಲಿ ಮನುಷ್ಯನ ನಾಗರಿಕತೆ ಹೆಚ್ಚಾದಂತೆಲ್ಲಾ ಜಾತೀಯತೆಯ ಕಲ್ಪನೆಗಳು ಹೆಚ್ಚಾಗ ತೊಡಗಿದವು. ಜಾತಿ ಪದ್ಧತಿಗಳು ಸಮಾಜದ ಒಂದು ವಿಶಿಷ್ಟ ಲಕ್ಷಣವಾಗಿ ಕಂಡುಬಂದಿದ್ದು ಇದನ್ನು ಹೊರತಾದ ಸಮಾಜದ ಸಾಮಾಜಿಕ ಪರಿಕಲ್ಪನೆ ಬುಡವಿಲ್ಲದ ಮರಗಳಂತೆ ನೆಲಕ್ಕುರುಳಬೇಕಾಗುವ ಸಂಭವವೇ ಹೆಚ್ಚು. ಇಂತಹ ಹಿನ್ನೆಲೆಯನ್ನು ಹೊಂದಿರುವ ಹಲವಾರು ಪ್ರದೇಶಗಳಲ್ಲಿ ಹೆಗ್ಗಡದೇವನ ಕೋಟೆ ತಾಲೂಕು ಸಹ ಒಂದಾಗಿದ್ದು ಹಲವು ಬಗೆಯ ಧರ್ಮ, ಜಾತಿ, ಉಪಜಾತಿ, ಬುಡಕಟ್ಟು ಜನಸಮುದಾಯವನ್ನು ಒಳಗೊಂಡಿದೆ. ಇಲ್ಲಿನ ವೈವಾಹಿಕ ಸಂಬಂಧಗಳು ಆಯಾ ಸಮುದಾಯಗಳ ಕುಲಪದ್ಧತಿಗಳಿಗನುಗುಣವಾಗಿ ನಡೆಯುತ್ತವೆ. ಪಾರಂಪರಿಕವಾಗಿ ತಲೆ ತಲೆಮಾರುಗಳಿಂದ ಉಳಿದು ಬಂದಿರುವ ಕೆಲವು ವೃತ್ತಿಗಳೇ ಅವರ ಜಾತಿಯನ್ನು ಪ್ರತಿಬಿಂಬಿಸುತ್ತವೆ ಹಾಗೂ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಇನ್ನಿತರ ಸಾಮಾಜಿಕ ವಿಚಾರಗಳು ಆಯಾ ಧರ್ಮ, ಜಾತಿಗಳಿಗೆ ಸಂಬಂಧಿಸಿದ ಹಾಗೇ ವೈಶಿಷ್ಟ್ಯತೆಯಿಂದ ಕೂಡಿರುತ್ತವೆ.*

***Keywords:*** *ಬುಡಕಟ್ಟು ಸಮುದಾಯ, ಯರವ, ಪಂಜರಿ, ಪಣಿಯ, ಬಡಗ.*

## ಪೀಠಿಕೆ

ಭಾಷೆ, ಆಚಾರ ವಿಚಾರ, ಉಡುಗೆ ತೊಡುಗೆ, ಊಟೋಪಚಾರ, ವ್ಯವಸಾಯದ ಕ್ರಮ, ನಂಬಿಕೆ, ಸಂಪ್ರದಾಯ, ಆಚರಣೆಗಳಿಗೆ ಸಂಬಂಧಿಸಿದ ಒಂದು ವಿಶಿಷ್ಟ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಜೀವನ ನಡೆಸುತ್ತಾರೆ. ಇವರಲ್ಲಿಯೂ ಅನೇಕ ಗುಂಪುಗಳಿದ್ದು ಇವರು ಸಾಮಾನ್ಯವಾಗಿ ನಾಗರಿಕ ಜನರ, ಆಧುನಿಕತೆಯ ಸೋಂಕಿನಿಂದ ದೂರವಿರಲು ಬಯಸುತ್ತಾರೆ. ಇಂತಹ ನಾಲ್ಕಾರು ಬುಡಕಟ್ಟು ಜನಸಮುದಾಯದವರು ಈ ಪ್ರದೇಶದಲ್ಲಿ ವಾಸಿಸುತ್ತಾರೆ. ಇಂತಹ ಆದಿವಾಸಿ ಬುಡಕಟ್ಟುಗಳಲ್ಲಿ ಒಂದಾದ 'ಯರವ' ಸಮುದಾಯವು ಕರ್ನಾಟಕದಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕು, ಸರಗೂರು ತಾಲೂಕು ಮತ್ತು ಕೊಡಗು ಜಿಲ್ಲೆಯ ವೀರಾಜಪೇಟೆ ತಾಲೂಕು ಹಾಗೂ ಸೋಮವಾರಪೇಟೆ ತಾಲೂಕುಗಳಲ್ಲಿ ವಾಸಮಾಡುತ್ತಿರುವುದು ಕಂಡುಬರುತ್ತದೆ. ಪ್ರಸ್ತುತ ಲೇಖನದಲ್ಲಿ ಹೆಗ್ಗಡದೇವನ ಕೋಟೆ ತಾಲೂಕಿನಲ್ಲಿ ವಾಸಿಸುವ ಯರವ ಬುಡಕಟ್ಟು ಸಮುದಾಯದ ಸಾಮಾಜಿಕ ಅಧ್ಯಯನಕ್ಕೆ ಸಂಬಂಧಿಸಿದ ಅಂಶಗಳನ್ನು ಅನುಭವತ್ಮಾಕವಾಗಿ ಪರಿಶೀಲಿಸಲಾಗಿದೆ.

***Please cite this article as:*** ಚಲುವರಾಜು* & ರಾಜೇಂದ್ರ ಕುಮಾರ್ (2022). ಯರವ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(5), 200–206.

ಯರವ ಬುಡಕಟ್ಟು ಸಮುದಾಯವು ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿದ್ದು. ಯರವ ಬುಡಕಟ್ಟು ಸಮುದಾಯದ ಜನರು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಪಶ್ಚಿಮ ಭಾಗ ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ವೈನಾಡು ಪ್ರದೇಶದಿಂದ ಹುಣಸೂರು ತಾಲೂಕಿನ ಹಾಗೂ ವೀರಾಜಪೇಟೆ ತಾಲೂಕುಗಳ ಗಡಿಯಲ್ಲಿರುವ ಅರಣ್ಯ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದಾರೆ. ಈ ಪ್ರದೇಶವು ನಾಗರಹೊಳೆ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನವನಕ್ಕೆ ಸೇರಿರುವ ಪ್ರದೇಶವಾಗಿದ್ದು. ಇಲ್ಲಿ ಮೈಸೂರು ಮಾನಂದವಾಡಿ ರಸ್ತೆ ಮತ್ತು ಮೈಸೂರು ಕಣ್ಣೂರನ್ನು ಸಂಪರ್ಕಿಸುವ ರಸ್ತೆಗಳು ಹಾಯ್ದುಹೋಗುತ್ತವೆ. ಈ ಕಾರಣದಿಂದಾಗಿ ಇಲ್ಲಿಯ ಯರವರು ಎರಡು ಕಡೆಯ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗಿದ್ದಾರೆ. ಕೇರಳ ಮತ್ತು ಕರ್ನಾಟಕದ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದಾರೆ. 2011ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಯರವ ಸಮುದಾಯದ ಜನಸಂಖ್ಯೆ 30,359 ಇದ್ದು ಇದರಲ್ಲಿ 14862 ಪುರುಷರು ಮತ್ತು 15497 ಮಹಿಳೆಯರ ಸಂಖ್ಯೆಯನ್ನು ಹೊಂದಿದ್ದಾರೆ. ಹಾಗೆಯೇ ಮೈಸೂರು ಜಿಲ್ಲೆಯಲ್ಲಿ 1,959 ಎರವ ಬುಡಕಟ್ಟಿನ ಜನಸಂಖ್ಯೆ ಇದ್ದು. ಇದರಲ್ಲಿ 1006 ಮಹಿಳೆಯರು ಮತ್ತು 953 ಪುರುಷರ ಜನಸಂಖ್ಯೆಯನ್ನು ಹೊಂದಿದ್ದಾರೆ. ಇವರು ಹೆಗ್ಗಡದೇವನ ಕೋಟೆ ತಾಲೂಕಿನ ಬ್ರಹ್ಮಗಿರಿ, ಎನ್ ಬೇಗೂರು, ಅಂಕನಾಥಪುರ, ಉದ್ಬೂರು, ಯಶವಂತಪುರ ಮತ್ತು ಬಸವನಗಿರಿ ಮುಂತಾದ ಹಾಡಿಗಳಲ್ಲಿ ವಾಸಿಸುತ್ತಿದ್ದಾರೆ.

ಯರವರು ದೈಹಿಕವಾಗಿ ಕಪ್ಪು ಬಣ್ಣದ ಚರ್ಮ ಹೊಂದಿದ್ದು, ಗುಂಗುರು ಕೂದಲು, ಅಗಲವಾದ ಮೂಗು, ದಪ್ಪವಾದ ತುಟಿ ಮತ್ತು ಶಕ್ತಿಯುತವಾದ ದೇಹವನ್ನು ಹೊಂದಿರುತ್ತಾರೆ. ಪಂಜರಿ (ಕೇರಳ ಮೂಲದ) ಎರವ ಸಮಾಜವು ಮಾತೃವಂಶೀಯರಾಗಿದ್ದು ಇವರಲ್ಲಿ ಮಕ್ಕಳು ತಾಯಿಯ ಕುಲಕ್ಕೆ ಸೇರಿರುತ್ತಾರೆ. ಗಂಡಾಗಲಿ, ಹೆಣ್ಣಾಗಲಿ ಮದುವೆಯ ನಂತರ ಕುಲದ ಮಾರ್ಪಾಡು ಅಥವಾ ಬದಲಾವಣೆಯನ್ನು ಹೊಂದುವುದಿಲ್ಲ. ಪಣಿಯರ ಸಮಾಜವು ಪಿತೃವಂಶೀಯರಾಗಿದ್ದು, ಇವರಲ್ಲಿ ಮಕ್ಕಳು ತಂದೆಯ ಕುಲಕ್ಕೆ ಸೇರುತ್ತಾರೆ. ಮದುವೆಯಾದ ನಂತರ ಹೆಣ್ಣು ಗಂಡನ ಕುಲಕ್ಕೆ ಸೇರುತ್ತಾಳೆ. ಪಂಜರಿ (ಕೇರಳ ಮೂಲದ) ಯರವರು ತಮ್ಮ ಕುಲಗಳನ್ನು ಕುಡಿ, ಚೆಮ್ಮ ಎಂದು ಕರೆಯುತ್ತಾರೆ. ಪಣಿಯರು ತಮ್ಮ ಕುಲಗಳನ್ನು ಪಟ್ಟೋಳೆ ತರನ ಎಂಬುದಾಗಿ ಕರೆದುಕೊಳ್ಳುತ್ತಾರೆ.

ಯರವ ಬುಡಕಟ್ಟು ಜನರು ತಮ್ಮ ಮನೆ ಕಟ್ಟುವ ಮೊದಲು ಕೆಲವೊಂದು ಕ್ರಮಗಳನ್ನು ಅನುಸರಿಸುತ್ತಾರೆ. ಇದರ ಜೊತೆಗೆ ಮನೆ ಕಟ್ಟುವವರು ಮತ್ತು ಕುಟುಂಬದ ಹಿರಿಯರು ಹಾಗೂ ಹಾಡಿಯ ಮುಖ್ಯಸ್ಥರು ಮನೆ ನಿರ್ಮಿಸುವ ಮೊದಲು ಜಾಗವನ್ನು ಗುರುತಿಸಿ ನಂತರ ಆ ಜಾಗದಲ್ಲಿ ಚೌಕಾಕಾರದಲ್ಲಿ ನಾಲ್ಕು ಕಲ್ಲುಗಳನ್ನು ಇಟ್ಟು, ಮೂರು ಕಲ್ಲಿನ ಮೇಲೆ ಒಂದು ಕಲ್ಲುನ್ನು ಇಟ್ಟು ಮನೆಗೆ ಬರುತ್ತಾರೆ. ನಂತರ ಮಾರನೇ ದಿವಸ ಆ ಜಾಗಕ್ಕೆ ಬಂದು ಇಟ್ಟ ನಾಲ್ಕು ಮೂಲೆಯ ನಾಲ್ಕು ಕಲ್ಲುಗಳನ್ನು ಪರೀಕ್ಷಿಸಲಾಗುವುದು. ಕಲ್ಲುಗಳು ಹೇಗೆ ಇಟ್ಟಿದ್ದರು ಹಾಗೇ ಉಳಿದುಕೊಂಡಿದ್ದರೆ ಮನೆ ಕಟ್ಟಲು ಇದು ಯೋಗ್ಯವಾದ ಸ್ಥಳವೆಂದು ಮತ್ತು ಕಲ್ಲುಗಳು ಕೆಳಗಡೆ ಉರುಳಿ ಹೋಗಿದ್ದರೆ ಇದು ಮನೆ ಕಟ್ಟಲು ಯೋಗ್ಯವಾದ ಸ್ಥಳವಲ್ಲ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಮನೆಯ ಉದ್ದ ಅಗಲಗಳು ಮನೆಯವರ ಅನುಕೂಲಕ್ಕೆ ತಕ್ಕಂತೆ ಇರುತ್ತದೆ. ಯರವ ಬುಡಕಟ್ಟಿನ ಜನರು ಮನೆಯನ್ನು ಅಥವಾ ಗುಡಿಸಲನ್ನು ನಿರ್ಮಿಸಲು ಗೆದ್ದಲು ಹಿಡಿದ ಮತ್ತಿ ಮರ, ದಿಂಡಲು ಮರ, ತೇಗದ ಮರದ ಆರು ಕಂಬಗಳನ್ನು ತಂದು (ಅದರಲ್ಲಿ ನಾಲ್ಕು ಸಣ್ಣದು, ಎರಡು ದೊಡ್ಡದು). ಇವುಗಳನ್ನು ಮಣ್ಣಿನಲ್ಲಿ ನೆಟ್ಟು ಆರು ಕಂಬಕ್ಕೆ ಐದು ಬಿದಿರಿನ ಪಟ್ಟಿಗಳನ್ನು ಜೋಡಿಸಲಾಗುತ್ತದೆ. ಅದರ ಮೇಲೆ ಸೀಳಿದ ಬಿದಿರಿನ ದಬ್ಬೆ

(ಅಮಜಿರ)ಗಳನ್ನು ಜೋಡಿಸಲಾಗುತ್ತದೆ. ಆನಂತರ ಮೇಲ್ಚಾವಣಿಯಾಗಿ ಭತ್ತದ ಹುಲ್ಲನ್ನು ಹಾಕಲಾಗುತ್ತದೆ. ಗೋಡೆಗಳನ್ನು ಸಾಮಾನ್ಯವಾಗಿ ಮಣ್ಣು ಮತ್ತು ಬಿದಿರಿನಿಂದ ನಿರ್ಮಿಸಲಾಗುತ್ತದೆ. ಇವರು ತಮ್ಮ ಮನೆಗಳನ್ನು ವಿಶಾಲವಾಗಿ ಕಟ್ಟುತ್ತಾರೆ. ಅದು ಅಡುಗೆ ಮನೆ, ಮಲಗುವ ಮನೆ, ಜಗಲಿಗಳಿಂದ ಕೂಡಿದ್ದು, ಇದರಲ್ಲಿ ಸಾಮಾನ್ಯವಾಗಿ 15 ರಿಂದ 20 ಜನ ವಾಸಮಾಡಲು ಸಾಧ್ಯವಾಗುವಂತಹ ಮನೆಗಳನ್ನು ನಿರ್ಮಿಸುತ್ತಾರೆ. ಸಾಮಾನ್ಯವಾಗಿ ಇವರು ಮನೆ ಕಟ್ಟುವಾಗ ಹಾಡಿಯ ಇತರ ಸಂಬಂಧಿಕರು ಸೇರಿದಂತೆ, ಸಂಸಾರದಲ್ಲಿ ಗಂಡ, ಹೆಂಡತಿ, ಮಕ್ಕಳು ಸೇರಿ ಕೆಲಸ ಮಾಡುವುದು ರೂಢಿಯಲ್ಲಿದೆ. ಹಿಂದಿನ ಕಾಲದಲ್ಲಿ ಇವರ ಒಂದು ಕುಟುಂಬದಲ್ಲಿ ಹತ್ತರಿಂದ ಹನ್ನೆರಡು ಜನರು ವಾಸವಿರುತ್ತಿದ್ದರು. ಆದರೆ ಈಗ ಅರಣ್ಯ ಕಾಯ್ದೆ ಮತ್ತು ಪುನರ್ವಸತಿಯಂತಹ ಕಾರ್ಯಕ್ರಮಗಳಿಂದ ಸಾಮಾಜಿಕವಾಗಿ ಆದಿವಾಸಿಗಳ ಮೇಲೆ ಹಲವಾರು ರೀತಿಯ ಪರಿಣಾಮಗಳಾಗಿದ್ದು, ಕುಟುಂಬದ ಜನಸಂಖ್ಯೆಯು ಇಳಿಮುಖವಾಗಿ ನಾಲ್ಕರಿಂದ ಐದು ಅಥವಾ ಇನ್ನೂ ಕಡಿಮೆ ಜನಸಂಖ್ಯೆಗೆ ಸೀಮಿತವಾಗಿ ವಾಸಿಸುತ್ತಾರೆ.

ಯರವರ ಮುಖ್ಯ ಕಸುಬು  ಅರಣ್ಯದ ಕಿರು ಉತ್ಪನ್ನಗಳ ಸಂಗ್ರಹಣೆಯಾಗಿದೆ. ಕಾಡಿನಲ್ಲಿ ದೊರೆಯುವ ಬಿದಿರನ್ನು ಬಳಸಿ ಕುಕ್ಕೆ ಮಾಡುವುದು, ಮೊರೆ ಮಾಡುವುದು. ಗೆರಸಿ ಎಣಿಯುವುದು, ಮುಂತಾದ ಬಿದಿರಿನ ಉತ್ಪನ್ನಗಳನ್ನು ಸಿದ್ದಪಡಿಸಿ ಅಕ್ಕ ಪಕ್ಕದ ಗ್ರಾಮದ ಜನರಿಗೆ ಮಾರುತ್ತಿದ್ದರು. ನಂತರದ ದಿನಗಳಲ್ಲಿ ವ್ಯವಸಾಯ ಮಾಡುವುದನ್ನು ಕಲಿತು ಕಾಡಿನ ಮಧ್ಯೆ ಹಾಗೂ ಕಾಡಂಚಿನಲ್ಲಿ ಜಮೀನನ್ನು ಹಸನುಗೊಳಿಸಿ, ದೊಡ್ಡಿ ಭತ್ತವನ್ನು ಬೆಳೆಯುವುದು ಇವರ ಬೇಸಾಯದ ಒಂದು ವೈಶಿಷ್ಟ್ಯವಾಗಿತ್ತು. ಇದರ ಜೊತೆಗೆ ಮರಗೆಣಸು, ಹುತ್ತರಿ ಗೆಣಸು ಸಿಹಿಗೆಣಸು, ಕೆಸ ಹಾಗೂ ಇನ್ನಿತರ ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಯರವ ಬುಡಕಟ್ಟಿನ ಜನರು ಕೃಷಿ ಕೂಲಿಯನ್ನೇ ಜೀವನಾಧಾರವಾಗಿ ಅವಲಂಬಿಸಿದ್ದು, ಆದರೆ ಇವರು ಮುಖ್ಯವಾಗಿ ಮಳೆ ಆಧಾರಿತ ಕೃಷಿಯನ್ನು ಮಾಡುವುದರಿಂದ ವರ್ಷ ಪೂರ್ತಿ ಇವರಿಗೆ ಕೆಲಸವು ದೊರೆಯುವುದಿಲ್ಲ ಮತ್ತು ಇತ್ತೀಚೆಗೆ ಇವರು ತಮ್ಮ ಅರಣ್ಯದ ಹಕ್ಕನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂದಿರುವುದರಿಂದ ಸಂಕಷ್ಟದಲ್ಲಿ ಜೀವನವನ್ನು ನಡೆಸುವ ಪರಿಸ್ಥಿತಿ ಬಂದಿದ್ದು ಕೂಲಿಗಾಗಿ ಕೊಡಗಿನ ಕಡೆ ವಲಸೆ ಹೋಗುತ್ತಿದ್ದಾರೆ ಸರ್ಕಾರದ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ ಹಲವಾರು ಅವಕಾಶಗಳಿಂದ ಮತ್ತು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ

ಯರವ ಸಮುದಾಯದ ಜನರು ಬೇಟೆಯಾಡಲು ಬಿಲ್ಲು ಮತ್ತು ಮಣ್ಣಿನ ಉಂಡೆಗಳನ್ನು ಬಳಸುತ್ತಾರೆ. ಇವರಿಗೆ ಬೇಟೆಯಲ್ಲಿ ಸಣ್ಣ ಪ್ರಾಣಿಗಳಾದ ಮೊಲ, ಮುಳ್ಳುಹಂದಿ, ಕೂರನಂತಹ ಪ್ರಾಣಿಗಳು ದೊರೆಯುತ್ತವೆ. ಇದರ ಜೊತೆಗೆ ಕಾಡು ಕೋಳಿ ಹಾಗೂ ಇತರ ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಕಾಡಿನ ಮಧ್ಯೆ ಹರಿಯುವ ಹಳ್ಳಕೊಳ್ಳಗಳಲ್ಲಿ ಮತ್ತು  ಇತರ ತೋಡುಗಳಲ್ಲಿ ಮೀನು, ಏಡಿಗಳನ್ನು ಹಾಗೂ ಪಕ್ಷಿಗಳನ್ನು ಹಿಡಿದು ಆಹಾರವಾಗಿ ಉಪಯೋಗಿಸುತ್ತಾರೆ.

ಯರವ ಸಮುದಾಯವು ಮದುವೆಯಲ್ಲಿ ವಿಶಿಷ್ಟವಾದ ಪದ್ಧತಿಯನ್ನು ಕಾಣಬಹುದು. ಹೊರಗಿನ ಇತರೆ ಸಮುದಾಯಗಳನ್ನು ಗಮನಕ್ಕೆ ತೆಗೆದುಕೊಂಡಾಗ ಎರವ ಸಮುದಾಯದ ವಿವಾಹ ಪದ್ಧತಿಯು ವಿಭಿನ್ನವಾಗಿದೆ. ಇವರಲ್ಲಿ ವಧುದಕ್ಷಿಣೆಯು ಪ್ರಚತಲಿತದಲ್ಲಿರುವುದು ವಿಶೇಷವಾಗಿದೆ. ಮದುವೆಯಲ್ಲಿ ವಿಳ್ಯೆ ಶಾಸ್ತ್ರವು ಅತಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ವಿಳ್ಯೆ ಶಾಸ್ತ್ರ ಎಂದರೆ ಉಂಗುರ ಬದಲಿಸುವುದು. ವಿಳ್ಯೆ ಶಾಸ್ತ್ರದಲ್ಲಿ ಹುಡುಗನು ಹುಡುಗಿಯ ಮನೆಗೆ ಒಡವೆಯನ್ನು ಹೊರತುಪಡಿಸಿ ಎಲ್ಲಾ  ಸೊತ್ತುಗಳನ್ನು ಕೊಂಡೊಯ್ಯಬೇಕು. ಜೊತೆಗೆ 30 ಜನ ಹಾಗೂ ವಿಳ್ಯೆ ಶಾಸ್ತ್ರಕ್ಕೆ ಸೇರಿದ

ಎಲ್ಲರಿಗೂ ಬೇಕಾಗುವಷ್ಟು ಸಾಮಾನುಗಳನ್ನು ಕೊಂಡೊಯ್ಯಬೇಕು. ಹುಡುಗ ಹುಡುಗಿಯ ಕಡೆಯವರಿಗೆ ಅಂದರೆ ಹುಡುಗಿಯ ತಂದೆ ತಾಯಿ, ಅಣ್ಣ ತಮ್ಮ, ಅಕ್ಕ ತಂಗಿ, ಮಾವ ಇವರಿಗೆ ಪೇಯಿ ಬಳೆಯ ಕ್ರಯದಂತೆ ದುಡ್ಡು ಕೊಟ್ಟು ಹುಡುಗಿಯನ್ನು ಕೊಂಡುಕೊಳ್ಳುವುದು ವಾಡಿಕೆಯಗಿದೆ.

ವಿಳ್ಯೆ ಶಾಸ್ತ್ರ ಮುಗಿದ ಮೇಲೆ ಒಂದು ದಿವಸ ಮದುವೆಯನ್ನು ನಿಶ್ಚಯ ಮಾಡುತ್ತಾರೆ. ನಿಶ್ಚಯ ಮಾಡಿದ ದಿವಸ ಮದುವೆಯೂ ಹುಡುಗಿಯ  ಮನೆಯಲ್ಲಿ ನಡೆಯುತ್ತದೆ. ಹುಡುಗ ಮದುವೆ ಕಾರ್ಯಕ್ಕಾಗಿ ಹುಡುಗಿಯ ಮನೆಗೆ ಹೋಗುತ್ತಾನೆ. ಹುಡುಗಿಯ ಮನೆಗೆ ಹೋಗುವಾಗ ತಡವಾಗಿ ಬಂದಿದ್ದಾರೆಂಬ ನೆಪ ಹೇಳಿ ಅರ್ಧ ದಾರಿಯಲ್ಲಿ ಸಾದಾರಣ ಒಂದು ಗಂಟೆ ಸಮಯ ತಡೆಯುತ್ತಾರೆ. ನಂತರ ಹುಡುಗಿ ಮನೆಯಿಂದ ಹಿರಿಯರೊಬ್ಬರು ಬಂದು ಅರಿಶಿಣ ಮತ್ತು ಕಪ್ಪು ನೀರಿನಿಂದ ಹುಡುಗನ ದೃಷ್ಟಿತೆಗೆದು ಸ್ವಾಗತಿಸಿ ಮನೆಗೆ ಕರೆದುಕೊಂಡು ಹೋಗಿ ಮದುವೆ ಮಂಟಪದಲ್ಲಿ ಕೂರಿಸುತ್ತಾರೆ. ಹುಡುಗಿಯನ್ನು ಕರೆದುಕೊಂಡು ಬಂದು ಹುಡುಗಿಯನ್ನು ಹುಡುಗಿಯ ಮಾವ ಮಧುಮಗನಿಗೆ ಧಾರೆಯೆರೆದು ಕೋಡುತ್ತಾನೆ. ಮಧ್ಯಾಹ್ನದ ಊಟವನ್ನು ಮುಗಿಸಿ ಮಧುಮಗ ಮತ್ತು ಮಧುಮಗಳು ತಮ್ಮ ಸಂಬಂಧಿಕರ ಆಶೀರ್ವಾದವನ್ನು ಪಡೆದುಕೊಂಡು ಹುಡುಗನ ಮನೆಗೆ ತೆರಳುತ್ತಾರೆ.

ಯರವ ಬುಡಕಟ್ಟು ಸಮುದಾಯದಲ್ಲಿ ಹೆರಿಗೆಯ ಕಾರ್ಯವು ಮನೆಗಳಲ್ಲೇ ನಡೆಯುತ್ತಿದ್ದವು. ಈ ಕಾರ್ಯವನ್ನು ಸಮುದಾಯದ ಹಿರಿಯ ಅಜ್ಜಿಯಂದಿರು ಮಾಡುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ಹೆರಿಗೆಯು ಆಸ್ಪತ್ರೆಗಳಲ್ಲಿ ನಡೆಯುವುದು ರೂಢಿಯಲ್ಲಿದೆ. ಹೆರಿಗೆಯಾದ ನಂತರ ಮಗುವಿನ ಹೊಕ್ಕಳನ್ನು ಕತ್ತರಿಸಲು ಎರವರು ಸಾಮಾನ್ಯವಾಗಿ ಬಿದಿರಿನ ದಬ್ಬೆಯನ್ನು ಬಳಸುತ್ತಾರೆ. ಮಗು ಹುಟ್ಟಿದ ತಕ್ಷಣ ಮಗುವಿಗೆ ತಾಯಿಯ ಎದೆಹಾಲನ್ನು ಕೊಡಿಸಲಾಗುವುದು. ಯರವರಲ್ಲಿ ಬಾಣಂತಿಯರಿಗೆ ಆರೋಗ್ಯದ ದೃಷ್ಠಿಯಿಂದ ನಂಜೀನ ಬೀಜದ ಕಷಾಯ ಹಾಗೂ ಯರವರಲ್ಲೇ ತಯಾರಿಸಲ್ಪಟ್ಟ ಸಾರಾಯಿಯನ್ನು ಕೊಡಲಾಗುತ್ತದೆ.

ಯರವರಲ್ಲಿ ಮಡಿ ವಿಚಾರಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಯರವರಲ್ಲಿ ಮಗು ಹುಟ್ಟಿದಾಗ ಸೂತಕ ಇರುತ್ತದೆ. ಇವರ ನಂಬಿಕೆಯಂತೆ ಮಗು ಹುಟ್ಟಿದಾಗ ಮನೆಯಲ್ಲಿ 'ಚೋಡೇಲೆ' ಎನ್ನುವ ಪ್ರೇತ ಇರುತ್ತದೆ. ಇದರಿಂದಾಗಿ ಹೆರಿಗೆ ಚನ್ನಾಗಿ ಆಯಿತು ಎನ್ನುವ ನಂಬಿಕೆ ಇದೆ. ಈ ಪ್ರೇತವನ್ನು ಐದನೇ ದಿವಸದಲ್ಲಿ ಮನೆಯಿಂದ ಹೊರೆಗೆ ಕಳುಹಿಸುವುದು. ಇದಕ್ಕಿಂತ ಹೆಚ್ಚು ಮುಂದುವರಿದರೆ ಇದೇ ಪ್ರೇತವು ಮಗುವಿನ ಹಾಗೂ ತಾಯಿಗೆ ಅಪಾಯಕಾರಿ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಅದುದರಿಂದಲೇ ಐದನೇ ದಿವಸದಲ್ಲಿ ಸೂತಕ ತೆಗೆದು ಶುದ್ಧ ಮಡುತ್ತಾರೆ. ಈ ದಿವಸ ಬೆಳಗಿನ ಜಾವ ಮನೆಯನ್ನು ಹಸುವಿನ ಸಗಣಿ ಮತ್ತು ಗಂಜಳಗಳಿಂದ ಸಾರಿಸಿ, ತಾಯಿ ಮಗುವಿಗೆ ಸ್ನಾನ ಮಾಡಿಸಿ, ಮನೆ ಜನರೇಲ್ಲ ಸ್ನಾನ ಮಾಡಿ ಶುದ್ಧವಾಗಿರುತ್ತಾರೆ. ಇದಾದ ನಂತರ ಹೆರಿಗೆ ಕೆಲಸಕ್ಕೆ ಬಂದ ಹೆಂಗಸಿಗೆ (ಛೇತಿಕಾರ್ತಿ) ಒಂದು ಸೀರೆ, ಒಂದು ಸೇರು ಅಕ್ಕಿ, ಒಂದು ತೆಂಗಿನಕಾಯಿ ತಲೆಗೆ ಎಣ್ಣೆ, ಮೆಣಸು, ಸಂಬಾರ ಹಾಗೂ ಕೈಯಲ್ಲಿ 15 ರೂಪಾಯಿಯನ್ನು ಊಡುಗೊರೆಯಾಗಿ ಕೊಡಲಾಗುವುದು. ನಂತರ ಅನ್ನದ ಗಂಜಿಯ ನೀರನ್ನು ಚೋಡೆಲೇ ಪ್ರೇತಕ್ಕೆ ಇಡಲಾಗುವುದು, ಚೋಡೆಲೆ ಪ್ರೇತ ಇದನ್ನು ಕುಡಿದು ಹೋಗುತ್ತದೆ ಎನ್ನುವ ನಂಬಿಕೆ ಯರವ ಸಮುದಾಯದ ಜನರು ಹೊಂದಿದ್ದಾರೆ.

ಯರವರಲ್ಲಿ ಸಾಮಾನ್ಯವಾಗಿ ಸತ್ತವರನ್ನು ಸುಡುತ್ತಾರೆ. ಸತ್ತ ದಿವಸ ಹೆಣಕ್ಕೆ ಸ್ನಾನ ಮಾಡಿಸಿ, ಗುರುಕಾರ ಹಾಗೂ ಇತರರ ನೇತೃತ್ವದಲ್ಲಿ ಶಾಸ್ತ್ರ ಮಾಡಿದ ನಂತರ ಹೆಣವನ್ನು ಸ್ಮಶಾಸನಕ್ಕೆ ಕೊಂಡೊಯ್ಯುತ್ತಾರೆ. ಸ್ಮಶಾಸನಕ್ಕೆ ಹೆಂಗಸರಿಗೆ ಹೋಗಲು ಅವಕಾಶ ಇರುವುದಿಲ್ಲ. ತಿಥಿ ಕಾರ್ಯವನ್ನು ಸಾವಿನ 13ನೇ ದಿವಸದಲ್ಲಿ ಆಚರಿಸಲಾಗುತ್ತದೆ. ಆ ದಿವಸ ಅವರ ಗುರುಕಾರ (ಕಂಜೆಲಾಡಿ) ನೇತೃತ್ವದಲ್ಲಿ ಸ್ಮಶಾಸನಕ್ಕೆ ಹೋಗಲಾಗುವುದು. ಹೋಗುವಾಗ ಸತ್ತ ವ್ಯಕ್ತಿಗೋಸ್ಕರ ಬುತ್ತಿಯನ್ನು ಕಟ್ಟಿಕೊಂಡು ಹೋಗಲಾಗುತ್ತದೆ. ಇದಾದ ಮೇಲೆ ಸ್ಮಶಾನದಲ್ಲಿ ಪೂಜೆ ಮಾಡಿ ಸಮಾಧಿಯ ಮೇಲೆ ತಂದ ಬುತ್ತಿಯನ್ನು  ಬಿಡಿಸಿ ಇಡಲಾಗುವುದು. ಜೊತೆಗೆ ಸ್ಮಶಾನದಲ್ಲಿ ಇಟ್ಟ ಪೇಯಿ ಬಳೆ (ಹಿತ್ತಾಳೆ ಬಳೆ) ಹಿಂದೆಗೆಯಲಾಗುವುದು. ಸತ್ತವರ ಆತ್ಮ ಈ ಪೇಯಿ ಬಳೆಯ ಜೊತೆಗೆ ಬರುವುದೆಂದು ನಂಬಿಕೆಯನ್ನು ಯರವರು ಹೊಂದಿದ್ದಾರೆ. ಸ್ಮಶಾನದಿಂದ ತಂದ ಪೇಯಿ ಬಳೆಯನ್ನು ಮನೆಯಲ್ಲಿ ಹೊಸ ಮಡಿಕೆಯಲ್ಲಿ ಅಕ್ಕಿಯ ಜೊತೆ ಹಾಕಿ ಅದರಲ್ಲಿ ಇಡಲಾಗುತ್ತದೆ. ಸತ್ತ ವ್ಯಕ್ತಿಯ ಆತ್ಮ ಅಕ್ಕಿಯಲ್ಲಿ ಕುಳಿತುಕೊಳ್ಳುವುದೆಂಬ ನಂಬಿಕೆ ಯರವರಲ್ಲಿದೆ.

ಯರವರ ಧಾರ್ಮಿಕ ಆಚರಣೆಗಳನ್ನು ನಾಲ್ಕು ರೀತಿಯಲ್ಲಿ ಕಾಣಬಹುದಾಗಿದೆ 1. ಗೃಹ ಮಟ್ಟದಲ್ಲಿ ನಡೆಯುವ ಆಚರಣೆಗಳು 2. ಕುಂಜಿನ ಮಟ್ಟದಲ್ಲಿ (ಹಾಡಿಯಲ್ಲಿ) 3. ಕೃಷಿಗೆ ಸಂಬಂಧಪಟ್ಟ ಆಚರಣೆಗಳು 4. ತೆರೆ ಮತ್ತು ಗದ್ದಿಗೆ ಕಟ್ಟುವ ಸಮಯದ ಆಚರಣೆಗಳು. ಸಾಮಾನ್ಯವಾಗಿ ಪ್ರತಿಯೊಬ್ಬ ಯರವರ ಮನೆಯಲ್ಲಿ ದೇವರಿಗಾಗಿ ಒಂದು ಸ್ಥಳ ಮೀಸಲಿದ್ದು ಅದು ಪೂರ್ವಾಭಿಮುಖವಾಗಿರುತ್ತದೆ. ಈ ಜಾಗಗಳಲ್ಲಿ ದೇವರುಗಳನ್ನು ಅಣಿಯಾಗಿ ಇಟ್ಟಿರುವ ಸ್ಥಿತಿಯು  ಒಂದೊಂದು ಮನೆಯಲ್ಲಿ ಒಂದೊಂದು ರೀತಿಯಲ್ಲಿರುತ್ತದೆ. ಮಣ್ಣಿನ ಎರಡು ಮೆಟ್ಟಲಿನ ಮೇಲೆ ಜಗಲಿಯನ್ನ ಗೋಡೆಗೆ ಸೇರಿಸಿದಂತೆ ಕಟ್ಟಿ ಅದನ್ನು ಸಗಣಿಯಿಂದ ಸಾರಿಸಿ ಅದರ ಮೇಲೆ ದೇವರುಗಳನ್ನು ಅಣಿಯಾಗಿ ಜೋಡಿಸುವುದು ಸಾಮಾನ್ಯ ಪದ್ಧತಿಯಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಮುಖ್ಯವಾಹಿನಿಯ ಪ್ರಭಾವ ಅಥವಾ ಆಧುನಿಕತೆಯ ಆಕರ್ಷಣೆಗೆ ಒಳಪಟ್ಟು ಯರವರು ದೇವರ ಪಟಗಳು ಮತ್ತು ಕ್ಯಾಲೇಂಡರ್‌ಗಳನ್ನು ಬಳಸಿ ಇತರರಂತೆ ಆಚರಣೆಗಳನ್ನು ನಡೆಸುವುದು ಕಂಡುಬರುತ್ತದೆ. ಇವರ ದೇವರ ಜಗಲಿಯ ಮೇಲೆ ನಾಗರ ಬೆತ್ತಗಳು, ಬಡಿ, ನವಿಲುಗರಿ, ತ್ರಿಶೂಲಗಳು, ಕಪ್ಪುಬಳೆಗಳು, ಹಿತ್ತಾಳೆ ಬಳೆಗಳು, ತಮ್ಮ ಹಿರಿಯರು ಹೋಗಿ ಬರುವಾಗ, ಕೆಲಸ ಮಾಡುವಾಗ, ನದಿ ದಾಟುವಾಟಗ ದೊರೆಯುವಂತ ವಿಗ್ರಹಗಳು ಮತ್ತು ದೊರೆಯುವ ವಿಚಿತ್ರ ಕಲ್ಲುಗಳುನ್ನು ತಂದು ಅದರ ಜೊತೆಗೆ ಮಣ್ಣಿನ ಮಡಿಕೆ, ಮೊರ ಇತ್ಯಾದಿಗಳನ್ನು ಜೋಡಿಸಿ ಇಡುತ್ತಾರೆ. ಜಗಲಿಯ ಕೆಳಗಿನ ಸ್ತರದಲ್ಲಿ ಗಂಟೆ, ಪೂಜೆಯ ತಟ್ಟೆ , ದೀಪ, ಧೂಪ, ಆರತಿ ಹಣತೆ, ದೀಪದ ಕಂಬ ಮುಂತಾದವುಗಳು ಇರುತ್ತವೆ. ಪೂಜಾ ಸ್ಥಾನದ ಮನೆಯ ಸೂರಿಗೆ ದುಡಿ ಮತ್ತು ಗೆಜ್ಜೆ ಸರಗಳನ್ನು ನೇತು ಹಾಕುತ್ತಾರೆ. ಪ್ರತಿ ನಿತ್ಯವೂ ತಮ್ಮ ಮನೆಯಲ್ಲಿರುವ ದೇವರುಗಳಿಗೆ ಕೈಮುಗಿದು ಗಂಧದ ಕಡ್ಡಿ ಹಚ್ಚಿ ಪೂಜೆ ಮಾಡುತ್ತಾರೆ. ವಾರದಲ್ಲಿ ತಮಗೆ ವಿಶೇಷವೆಂದು ತೋರಿದ ದಿನ ದೇವರಮನೆಯನ್ನು ಸಾರಿಸಿ ದೇವರನ್ನು ತೊಳೆದು ಪೂಜೆ ಮಾಡುವರು.

ಯರವರ ಪ್ರತಿಯೊಂದು ಕುಂಜಿನ ಹೊರವಲಯದಲ್ಲಿ ಒಂದು ಗುಡಿ ಇರುತ್ತದೆ. ಇದನ್ನು ‘ಅಂಬಾಲ’ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಇದು ಒಂದು ಸ್ತ್ರೀ ದೇವತೆ ಅಥವಾ ಭೂತ ದೈವವಾಗಿರುತ್ತದೆ. ಸಾಧಾರಣವಾಗಿ ಈ ಗುಡಿಗಳ ಹಿಂದೆ ಸೊಂಪಾಗಿ ಬೆಳದ ಮರಗಳ ತೋಪುಗಳಿರುತ್ತವೆ. ಗುಡಿಯ ಹೊರ ಭಾಗಗದಲ್ಲಿ ಎರಡೂ ಬದಿಗಳಲ್ಲಿ ಜಗಲಿಗಳಿದ್ದು ಮುಂದಿನ

ಅಂಗಳವನ್ನು ಭಕ್ತಾದಿಗಳು ಕೂರಲು ಬಳಸುತ್ತಿದ್ದರು. ಅದರ ಮುಂದಿನ ಅಂಗಳದಲ್ಲಿ ದೇವರ ಪ್ರತಿಷ್ಠಾಪನೆ ಮಾಡುತ್ತಾರೆ. ದೇವಾಲಯದ ಸುತ್ತಮುತ್ತಲ ಪ್ರದೇಶವನ್ನು ಸಗಣಿಯಿಂದ ಸಾರಿಸಿ ಶುದ್ಧವಾಗಿಟ್ಟುರುತ್ತಾರೆ. ಅಂಗಳದಲ್ಲಿ ಒಂದು ತುಳಿಸಿಕಟ್ಟೆ, ಅಸುಪಾಸಿನಲ್ಲಿ ಕಣಗಲೆ, ದಾಸವಾಳ ಮುಂತಾದ ಹೂವಿನ ಗಿಡಗಳನ್ನು ಬೆಳೆಸಿರುತ್ತಾರೆ. ಗುಡಿಗಳಲ್ಲಿಯೂ ಎರಡು ಮೆಟ್ಟಿಲುಗಳ ಜಗಲಿಯನ್ನು ನಿರ್ಮಿಸಿ ಮನೆಯೊಳಗಿನ ದೇವರುಗಳ ಅಣಿಯಂತೆಯೇ ಮಾಡುತ್ತಾರೆ. ಇಲ್ಲಿನ ವಿಶೇಷವೆಂದರೆ ಆ ಕುಂಜಿಗೆ ಸೇರಿದ ತಮ್ಮಡಿ ಅಥವಾ ಕನ್ನಲಾಡಿಯು ಆ ದೇವರ ಅರ್ಚಕನಾಗಿರುತ್ತಾನೆ.

ಸಾಮಾನ್ಯವಾಗಿ ಎರವರು ಫೆಬ್ರವರಿಯಿಂದ ಏಪ್ರಿಲ್ ತಿಂಗಳುಗಳ ನಡುವೆ ಬಿಡುವಿನ ದಿನಗಳಾಗಿರುತ್ತವೆ. ವಿರಾಮದ ಜೊತೆಗೆ ಮಳೆಗಾಲವಿಲ್ಲವಾದ್ದರಿಂದ ಕಾಡಿನ ಕಿರು ಉತ್ಪನ್ನಗಳ ಮಾರಾಟದ ಆದಾಯವು ಇರುತ್ತದೆ. ಆದ್ದರಿಂದ ಈ ಅವಧಿಯಲ್ಲಿ ಇವರು ಹೆಚ್ಚಾಗಿ ತಮ್ಮ ಕುಲದೇವತಾರಧನೆ ಮತ್ತು ಪಿತೃಪೂಜೆ ಮುಂತಾದ ಸಂಸ್ಕಾರ ಸಮಾರಂಭಗಳನ್ನು ಕೈಗೊಳ್ಳುವರು. ಈ ಸಮಯದಲ್ಲಿ ಸೂಕ್ತವಾದ ಒಂದು ದಿನ ಗುಡಿಯ ದೇವರಿಗೆ ಸಂಬಂಧಪಟ್ಟಂತೆ ಹಬ್ಬವೊಂದನ್ನು ಏರ್ಪಡಿಸುವರು. ಅ ದಿನ ಯರವರು ಆ ದೇವರಿಗೆ ಹೊತ್ತಿದ್ದ ಹರಕೆಗಳನ್ನು ಸಲ್ಲಿಸಿ, ಹಾಲು, ಅವಲಕ್ಕಿ ನೈವೇದ್ಯ, ಹಣ್ಣು ಕಾಯಿ, ಕೋಳಿ ಬಲಿ ಕೊಟ್ಟು ಪೂಜಿಸುವರು. ಆಯಾಯ ಕುಂಜಿನ ಕುಂಜುಕಾರರು ಪ್ರತಿಯೊಂದು ಮನೆಯಿಂದಲೂ ದವಸ ಧಾನ್ಯ ಕಾಣಿಕೆಯ ರೂಪದಲ್ಲಿ ಚಂದಾ ವಸೂಲಿ ಮಾಡಿ ಗ್ರಾಮದ ಹಬ್ಬಗಳನ್ನು ನಡೆಸುವರು. ಹಬ್ಬದ ಅಂಗವಾಗಿ ಹಾಡು, ಕುಣಿತ ಊಟೋಪಚಾರ ಮುಂತಾದವುಗಳನ್ನು ಯರವರು ಮಾಡುತ್ತಾರೆ.

ಧಾರ್ಮಿಕ ಆಚರಣೆಗಳಲ್ಲಿ ಮತ್ತೊಂದು ಮುಖ್ಯ ಬಗೆ 'ತೆರೆಗಳು'. ದೇವರುಗಳಿಗೆ, ಚೆಮ್ಮದ ಮೂಲ ಪುರುಷರಿಗೆ ಸಂಬಂಧಿಸಿದಂತೆ ತೆರೆಯನ್ನು ಕಟ್ಟುವರು. ತೆರೆ ಕಟ್ಟಿಕೊಳ್ಳುವ ವ್ಯಕ್ತಿ ಸ್ನಾನ ಮಾಡಿ ಮಡಿಪಂಚೆಯನ್ನುಟ್ಟು, ಸೊಂಟಕ್ಕೆ ಒಂದು ಕೆಂಪು ವಸ್ತ್ರವನ್ನು ಕಟ್ಟಿಕೊಳ್ಳುವರು. ಆ ಸಮಯಕ್ಕೆ ಮನೆಯವರು ಅಕ್ಕಿ ಮತ್ತು ಅರಿಶಿಣವನ್ನು ನಯವಾಗಿ ಅರೆಯುತ್ತಾರೆ. ನಂತರ ಒಬ್ಬ ಸಹಾಯಕ ಮಿಶ್ರಣವನ್ನು ಚೆನ್ನಾಗಿ ಅದ್ದಿ ಮುಖ, ಕತ್ತು, ಬೆನ್ನು, ತೋಳುಗಳ ಮೇಲೆ ಲೇಪಿಸಿ ಗೀರುಗಳು, ಸುರುಳಿಗಳು, ಚುಕ್ಕಿಗಳ ವಿನ್ಯಾಸ ಬಿಡಿಸುತ್ತಾನೆ. ತಲೆಗೆ ಒಂದು ಶಲ್ಯವನ್ನು ಸುತ್ತಿ ಅದರ ಮೇಲೆ ಬೆಂಡು ಮರದಿಂದ ಮಾಡಿದ ಭುಜಕಿರ್ತಿ, ಎದೆ ಪಟ್ಟಿ, ಕಿರಿಟಾಕೃತಿಯ ಹಣೆಪಟ್ಟಿ ಕಟ್ಟುವನು. ಕಾಲುಗಳಿಗೆ ಗೆಜ್ಜೆಸರ, ಕೊರಳಿಗೆ ಮಣಿಸರಗಳನ್ನು ತೊಡಿಸುವನು. ಇದಾದ ನಂತರ ಸಿದ್ದನಾಗಿ ನಿಂತ ವ್ಯಕ್ತಿ ಎರಡು ಕೈಗಳಲ್ಲಿ ಬಾಳೆ ದಿಂಡನ್ನು ಹಿಡಿದು ತಾನು ಆಹ್ವಾನಿಸಬೇಕಾದ ಭೂತ, ದೈವವನ್ನು ಪ್ರಾರ್ಥಿಸುವನು. ಪ್ರಾರ್ಥನೆಯನ್ನು ಮನ್ನಿಸಿ ದೈವವು ಅವನ ಶರೀರದಲ್ಲಿ ವಶವಾಗುವುದು. ಆವೇಶಗೊಂಡ ವ್ಯಕ್ತಿ ತರತನೆ ನಡುಗಲಾರಂಬಿಸುತ್ತಾನೆ. ಈತನ ಮುಖದ ಛಾಯೆ ಬದಲಾಗುತ್ತದೆ. ಅವನ ಧ್ವನಿ ಬೇರೆಯಾಗುತ್ತದೆ. ಈ ಸಂದರ್ಭದಲ್ಲಿ ಅವನ ವರ್ತನೆ ಮತ್ತು ವ್ಯಕ್ತಿತ್ವಕ್ಕೆ ತಾಳೆ ಇಲ್ಲದ ರೀತಿ ವರ್ತಿಸಿ, ಸಿಟ್ಟು, ಸೆಡವು ತೋರಿಸಿ ಹಲ್ಲು ಕಡಿದುಕೊಂಡು ಕುಣಿದಾಡುತ್ತಾನೆ. ಕೆಲವು ಸಂದರ್ಭದಲ್ಲಿ ಜನರ ಹತ್ತಿರ ಅಪ್ಪಿಸಿ ನೋಡುತ್ತಾನೆ. ಶಾಂತ ಸ್ವಾಭಾವದ ದೇವತೆ ಬಂದರೆ ಪ್ರಸನ್ನವದನನಾಗಿ, ಆಶೀರ್ವಾದಗಳನ್ನು ನೀಡಬಹುದು. ಈ ಸಂದರ್ಭದಲ್ಲಿ ಮನೆಯ ಯಜಮಾನ ಒಂದು ಮೊರದಲ್ಲಿ ಹಿಡಿ ಅಕ್ಕಿ ಮತ್ತು ಬೂದಿಯನ್ನು ಬೆರೆಸಿ ದೇವರು ಮೈದುಂಬಿರುವ ವ್ಯಕ್ತಿಗೆ ನೀಡುತ್ತಾನೆ. ಆ ವ್ಯಕ್ತಿ ಒಂದು ಹಿಡಿ ಅಕ್ಕಿಯನ್ನು ಯಜಮಾನನಿಗೆ ಕೊಟ್ಟು ಹಣೆಗೆ ವಿಭೂತಿಯನ್ನು ಇಡುತ್ತಾನೆ. ಕೊಟ್ಟ ಈ ಹಿಡಿ ಅಕ್ಕಿಯನ್ನು ಲೆಕ್ಕ ಮಾಡಿದಾಗ ಅಕ್ಕಿ ಕಾಳುಗಳು ಬೆಸ ಸಂಖ್ಯೆಯಲ್ಲಿದ್ದರೆ. ಒಳ್ಳೆಯದಾಗುವುದೆಂದು ಸಮ

ಸಂಖ್ಯೆಯಲ್ಲಿದ್ದರೆ ಕೆಟ್ಟದಾಗುವುದೆಂಬ ನಂಬಿಕೆ ಇದೆ. ದೇವರು ಮೈಮೇಲೆ ಬಂದ ವ್ಯಕ್ತಿಯ ಮೈನಡುಕ ಪರಕಾಷ್ಠೆ ಮುಟ್ಟಿದಾಗ ಮನೆಯ ಯಾಜಮಾನ ಹಾಲು, ಹಣ್ಣು ಕಾಯಿ ನೈವೇದ್ಯಮಾಡಿ ದೀಪದಾರತಿ ಬೆಳಗಿಸುತ್ತಾನೆ.

ಮಾತೃ ದೇವತೆಗಳನ್ನು ಅಥವಾ ಸ್ತ್ರೀ ದೇವತೆಗಳನ್ನು ಕುರಿತು ಆಹ್ವಾನಿಸುವುದನ್ನು ದೇವರು ಕರೆಯುವುದು ಅಥವಾ ಗದ್ದಿಗೆ ಹೂಡುವುದು ಎಂದು ಕರೆಯುತ್ತಾರೆ. ಇದು ಬಹುಮಟ್ಟಿಗೆ ತೆರೆಯನ್ನೇ ಹೋಲುವಂತದ್ದಾಗಿದು, ಇಲ್ಲಿ ದೇವರು ಬರುವ ವ್ಯಕ್ತಿಗೆ ತೆರೆಯ ಸಂಪ್ರದಾಯದಂತೆ ಅಲಂಕಾರಗಳಿರುವುದಿಲ್ಲ. ಇಲ್ಲಿ ಕರೆಯುವ ದೇವತೆಗಳು ಸ್ತ್ರೀ ದೇವತೆಗಳಾಗಿರುತ್ತಾರೆ. ಯರವರು ಪ್ರಮುಖವಾಗಿ ಕೃಷಿ ಪ್ರಿಯರಾಗಿರುವುದರಿಂದ ಬೇಸಾಯಕ್ಕೆ ಸಂಬಂಧಪಟ್ಟ ಕೆಲವು ಧಾರ್ಮಿಕ ಕ್ರಿಯೆಗಳನ್ನು ರೂಢಿಸಿಕೊಂಡಿರುತ್ತಾರೆ. ಎರವರು ತಮ್ಮ ಬೇಸಾಯದ ಸಲಕರಣೆಗಳಾದ ನೆಂಜಲು (ನೊಗ), ನೇಗಿಲು, ಗುದ್ದಲಿ, ಕೈಕೊಟ್ಟು ಮುಂತಾದವುಗಳನ್ನು ಹಾಗೂ ಮನೆಯ ದನಕರುಗಳನ್ನು ಶುಚಿಗೊಳಿಸಿ ಮನೆಯ ಮುಂದೆ ಬೇಸಾಯದ ಸಲಕರಣೆಗಳನ್ನು ಇಟ್ಟು, ದನಕರುಗಳನ್ನು ಸೇರಿಸಿ ಹೂವು, ಕುಂಕುಮ ಇಟ್ಟು ಪೂಜೆ ಮಾಡುತ್ತಾರೆ. ತಮ್ಮ ಮನೆಯಲ್ಲಿರುವ ದೇವರ ಮುಂದೆ ದೀಪ ಹಚ್ಚಿ, ಸಿಹಿ ಅಡುಗೆಯ ಎಡೆ ಇಟ್ಟು ತರುವಾಯ, ತಮ್ಮ ತಮ್ಮ ಹೊಲ ಗದ್ದೆಗಳಿಗೆ ಹೋಗಿ ಏರು ಕಟ್ಟಿ ವರ್ಷದ ಬೇಸಾಯ ಶುರು ಮಾಡುತ್ತಾರೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಹೆಗ್ಗಡದೇವನ ಕೋಟೆ ತಾಲೂಕಿನ ಯರವ ಸಮುದಾಯವು ವಿಶಿಷ್ಟವಾದ ಸಂಪ್ರದಾಯಗಳೊಂದಿಗೆ ಜೀವನ ಮಾಡುತ್ತಿರುವದನ್ನು ತಿಳಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಬುಡಕಟ್ಟು ಸಮುದಾಯವು ಅವರದೇ ಆದ ಸಾಮಾಜಿಕ ಆಚರಣೆಗಳನ್ನು, ಸಂಪ್ರದಾಯಗಳನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ.

**ಪರಾಮರ್ಶನ ಗ್ರಂಥಗಳು**


- ಬರಗೂರು ರಾಮಚಂದ್ರಪ್ಪ. (2011). *ಉಪ ಸಂಸ್ಕೃತಿ ಅಧ್ಯಯನ ಮಾಲೆ.* ಕರ್ನಾಟಕ ಸಾಹಿತ್ಯ ಆಕಾಡೆಮಿ.
- ಗಿರೀಗೌಡ. ಎನ್. (2011). *ಹೆಗ್ಗಡದೇವನಕೋಟೆ ತಾಲೂಕು ಗ್ಯಾಸೆಟಿಯರ್.* ಕರ್ನಾಟಕ ಸರ್ಕಾರ.
- ಕ್ಷೀರಸಾಗರ. (2013). *ಕಾಡಿನ ನಾಡಿ ಮಿಡಿದವರು.* ಸಮಗ್ರ ಗ್ರಾಮೀಣ ಆಶ್ರಮ.
- ಮಧು ಗುಂಡ್ಲಪೇಟೆ, ಅನ್ನಪೂರ್ಣ ಎಂ ಮತ್ತು ಮಂಜುನಾಥ ಬಿ.ಆರ್ (2017). *ಕರ್ನಾಟಕ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ.* ಪ್ರಜಾವಿಕಾಸ ಸೇವಾ ಸಂಸ್ಥೆ.
- ಪ್ರಭಾಕರ, ಎ. ಎಸ್. (2008). *ಆದಿವಾಸಿ ಆಖ್ಯಾನ.* ಸಿದ್ಧಾರ್ಥ ಪ್ರಕಾಶನ.
- ವಿಜಯ್ ತಂಬಂಡ ಪೊಣಚ್ಚ. (2004). *ಕೊಡಗಿನ ಗುಲಾಮರು.* ಬುಡಕಟ್ಟು ಅಧ್ಯಯನ.